

ಕೃಷ್ಣಮೂರ್ತಿ ಪುರಾಣಿಕರ 'ಧರ್ಮ ದೇವತೆ' ಕಾದಂಬರಿ ಆಧರಿತ 'ಕರುಣೆಯೇ ಕುಟುಂಬದ ಕಣ್ಣು' ಸಿನಿಮಾ

ಸುವರ್ಣ ಸಂಭ್ರಮ



# ಕಾದಂಬರಿಗಳ ಸರಮಾಲೆ, ಸಿನಿಮಾದಲ್ಲೂ ಜಯಮಾಲೆ

## ಕೃಷ್ಣಮೂರ್ತಿ ಪುರಾಣಿಕ

**ಜಗನ್ನಾಥ ಪ್ರಕಾಶ್ ಎನ್.**

ಕನ್ನಡ ಚಿತ್ರರಂಗ ಇನ್ನೊಂದು ದಶಕದಲ್ಲಿ ಶತಮಾನಕ್ಕೆ ಕಾಲಿಡಲಿದೆ. ಸದ್ಯ ಒಂಬತ್ತು ದಶಕಗಳನ್ನು ಪೂರೈಸಿ ಮುನ್ನಡೆಯುತ್ತಿರುವ ಕನ್ನಡ ಚಿತ್ರೋದ್ಯಮದ ಸಾಹಿತ್ಯದ ನಂಟಿನಲ್ಲಿ ನೆನಪಿಸಿಕೊಳ್ಳಬೇಕಾದ ಮುಖ್ಯವಾದ ಹೆಸರುಗಳಲ್ಲಿ ಕೃಷ್ಣಮೂರ್ತಿ ಪುರಾಣಿಕ ಅವರದೂ ಒಂದು.

ಕೃಷ್ಣಮೂರ್ತಿ ಪುರಾಣಿಕರು ಮೂಲತಃ ಜನಪ್ರಿಯ ಕಾದಂಬರಿಕಾರರು. ಅವರ 'ಧರ್ಮ ದೇವತೆ' ಕಾದಂಬರಿಯನ್ನು ಆಧರಿಸಿದ ಸಿನಿಮಾ 'ಕರುಣೆಯೇ ಕುಟುಂಬದ ಕಣ್ಣು'. ಕಾದಂಬರಿಯನ್ನು ಆಧರಿಸಿದ ಮೊದಲ ಕನ್ನಡ ಸಿನಿಮಾ ಎನ್ನುವುದು ಇದರ ಅಗ್ಗಳಿಕೆ. ರಾಜಕುಮಾರ್, ಲೀಲಾವತಿ, ರಾಜಾಶಂಕರ್, ಆದವಾನಿ ಲಕ್ಷ್ಮೀದೇವಿ ಮೊದಲಾದವರು ತಾರಾಗಣದಲ್ಲಿದ್ದ ಈ ಚಿತ್ರದ ನಿರ್ದೇಶಕ ಟಿ.ವಿ. ಸಿಂಗ್ ಠಾಕೂರ್. ಸಂಗೀತ ನಿರ್ದೇಶನ ಜಿ.ಕೆ. ವೆಂಕಟೇಶ್ ಅವರದ್ದು.

ರಮಣೀಯ ಗೋಕಾಕ್ ಪಟ್ಟಣವನ್ನು ಹಿನ್ನೆಲೆಯಾಗಿಟ್ಟುಕೊಂಡು ಕೃಷ್ಣಮೂರ್ತಿ ಪುರಾಣಿಕರು ರಚಿಸಿದ ಸಾಹಿತ್ಯ ಸಹಜವಾಗಿಯೇ ಜನಮನ್ನಣೆ ಗಳಿಸಿದೆ. ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಅವರದ್ದು ಮಹತ್ವದ ಹೆಸರು. ಕಾವ್ಯ, ನಾಟಕ, ಕಥೆಗಳನ್ನು ರಚಿಸಿದರೂ ಅವರ ಭಾವಪೂರ್ಣ ರಮ್ಯ ಕಾದಂಬರಿಗಳೇ ಓದುಗರ ಪ್ರೀತಿಯ ಕೃತಿಗಳು.

ಬಾಗಲಕೋಟೆ ಜಿಲ್ಲೆಯ ಬೀಳಗಿ ಗ್ರಾಮದಲ್ಲಿ ಹುಟ್ಟಿದ ಕೃಷ್ಣಮೂರ್ತಿ ಪುರಾಣಿಕರು ವ್ಯಾಸಂಗ ಮಾಡಿದ್ದು ಬಾಗಲಕೋಟೆ ಹಾಗೂ ಧಾರವಾಡದಲ್ಲಿ. ಓದುವಾಗಲೇ ಕಾವ್ಯಗೋಷ್ಠಿಗಳಲ್ಲಿ ಭಾಗವಹಿಸುತ್ತಿದ್ದ ಅವರ ಬರಹಗಳು ಆಗಲೇ ಪತ್ರಿಕೆಗಳಲ್ಲಿ ಬೆಳಕು ಕಾಣುತ್ತಿದ್ದವು. ಗೋಕಾಕದ ಮುನಿಸಿಪಲ್ ಪ್ರೌಢಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿ ಕಾಯಕಕ್ಕೆ ನಿಂತ ಕೃಷ್ಣಮೂರ್ತಿ ಪುರಾಣಿಕರ ಸಾಹಿತ್ಯ ಸೃಷ್ಟಿ ನಿರಾತಂಕವಾಗಿ ಮುಂದುವರೆದಿತ್ತು.

ಗ್ರಾಮ ಜೀವನದ ಏಳುಬೀಳು, ಮಹಿಳೆಯರ ಹತ್ತಾರು ಪಡಿಪಾಟಲುಗಳನ್ನು ಸಮರ್ಥವಾಗಿ ಬಿಂಬಿಸಿದ ಕೃಷ್ಣಮೂರ್ತಿ ಪುರಾಣಿಕರು ಬದುಕಿನ ಏಳುಬೀಳುಗಳಿಗೆ ತಮ್ಮ ಕೃತಿಗಳಲ್ಲಿ ಹೆಚ್ಚಿನ ಒತ್ತು ಕೊಟ್ಟಿದ್ದರಿಂದ ಅವು ಮನೆಮನೆಯ ಕಥೆ–ಕಾದಂಬರಿಗಳಲ್ಲಿ ಕಾಣಿಸಿಕೊಂಡು ಎಲ್ಲಾ ಓದುಗರ ಗಮನ ಸೆಳೆದವು.

ಆರಂಭದಲ್ಲಿ ಕಾವ್ಯದಲ್ಲೇ ತಮ್ಮನ್ನು ಹೆಚ್ಚಾಗಿ ತೊಡಗಿಸಿಕೊಂಡಿದ್ದ ಅವರು ಶಿವರಾಮ ಕಾರಂತರ ಪ್ರೇರಣೆಯಿಂದ ಗದ್ಯದತ್ತ ತಿರುಗಿದರು. ಮುಂದಿನ ದಿನಗಳು ಅವರು ಕಾದಂಬರಿ ಪಥದಲ್ಲಿ ನಡೆಯಲು ಸಾಧ್ಯವಾಯಿತು.

ಭಾರತ ಸ್ವಾತಂತ್ರ್ಯ ಪಡೆದ ಮರು ವರ್ಷ ಕೃಷ್ಣಮೂರ್ತಿ ಪುರಾಣಿಕರ ಮೊದಲ ಕಾದಂಬರಿ 'ಮುಗಿಲ ಮಲ್ಲಿಗೆ' ಪ್ರಕಟಗೊಂಡಿತು. ಮುಂದೆ ಅವರು ಬರೆದಿದ್ದು 80 ಕಾದಂಬರಿಗಳು. ಜನಪ್ರಿಯತೆಯ ತುತ್ತತುದಿಗೆ ತಲುಪಿದ ಕೃಷ್ಣಮೂರ್ತಿ ಪುರಾಣಿಕರು ನಡುನಡುವೆ ಕಥೆ, ಕವನ, ಮಕ್ಕಳ ಸಾಹಿತ್ಯ ಬರೆಯುವುದನ್ನೇನು ನಿಲ್ಲಿಸಲಿಲ್ಲ. ಕಾದಂಬರಿಗಳನ್ನು ಮಾತ್ರ ಎಡೆಬಿಡದಂತೆ ಬರೆದರು. ತಮ್ಮ ಸುತ್ತಣ ಪರಿಸರದೊಂದಿಗೆ ಸೇರಿಕೊಂಡಿದ್ದ ಅವರ ಕಾದಂಬರಿ ವಿಷಯಗಳು ಓದುಗರ ಮನೆ ಮನ ತಟ್ಟಿದವು. ಓದುಗರ ಮನಸ್ಸಿನಲ್ಲಿ ಬಹುಕಾಲ ಉಳಿಯುವಂತಹ ಸನ್ನಿವೇಶಗಳನ್ನು ಬರೆಯುವಲ್ಲಿ ಪುರಾಣಿಕರು ಸಿದ್ಧಹಸ್ತರಾಗಿದ್ದರು.

ಕಲ್ಪನೆಗಿಂತ ವಾಸ್ತವ ಸಂಗತಿಗಳ ಬಗ್ಗೆ ಹೆಚ್ಚು ಬರೆದ ಕೃಷ್ಣಮೂರ್ತಿ ಪುರಾಣಿಕರಿಗೆ ಪ್ರಶಸ್ತಿ ಗೌರವಗಳು ಲಭಿಸಿದ್ದು ಒಂದೆಡೆಯಾದರೆ, ಓದುಗರ ಜೊತೆಗೆ ನೋಡುಗರು ಅವರೊಂದಿಗೆ ಹೆಜ್ಜೆ ಹಾಕಿದ್ದು ಉಲ್ಲೇಖನಾರ್ಹ.

ಶಹನಾಯ್ ಶ್ರೇಷ್ಠ ಬಿಸ್ಮಿಲ್ಲಾಖಾನ್ ಹಾಗೂ ಶ್ರೇಷ್ಠ ಕಲಾವಿದ ರಾಜಕುಮಾರ್ ಸಂಗಮದ 'ಸನಾದಿ ಅಪ್ಪಣ್ಣ' ಜನಮೆಚ್ಚುಗೆ ಪಡೆದ ಪುರಾಣಿಕರ ಕೃತಿಗಳಲ್ಲೊಂದು. ಒಂದಲ್ಲ ಎರಡಲ್ಲ, ಕೃಷ್ಣಮೂರ್ತಿ ಪುರಾಣಿಕರ 11 ಕಾದಂಬರಿಗಳು ಬೆಳ್ಳಿ ಪರದೆಯನ್ನು ಅಲಂಕರಿಸಿವೆ.

'ಮಣ್ಣಿನ ಮಗಳು', 'ಹಾಲುಂಡ ತವರು', 'ಪಾವನಗಂಗಾ' ಕಾದಂಬರಿಗಳು ಸಿನಿಮಾ ರೂಪ ತಾಳಿ ಬೆಳ್ಳಿಪರದೆಯಲ್ಲೂ ಹೆಸರು ಮಾಡಿದವು. ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿಗಳಲ್ಲಿ ಹೆಚ್ಚಾಗಿ ಕಂಡುಬರುವ ಹೆಣ್ಣುಮಕ್ಕಳ ನೋವು ನಲಿವುಗಳ ಸಂಗತಿಗಳು ನೋಡುಗರನ್ನು ಸೆಳೆದಿದ್ದವು. ಜನತೆಯ ನಾಡಿಮಿಡಿತವನ್ನೇ ಕೃಷ್ಣಮೂರ್ತಿ ಪುರಾಣಿಕರು ತಮ್ಮ ಸಾಹಿತ್ಯದಲ್ಲಿ ಅಚ್ಚೊತ್ತಿದ್ದರೆಂಬುದು ವಾಸ್ತವ.

ಪ್ರತಿಕ್ರಿಯಿಸಿ: feedback@sudha.co.in